KA / :G-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಜೂನ್ ೨೩, ೨೦೧೧ (ಆಷಾಢ ೨, ಶಕ ವರ್ಷ ೧೯೩೩)	ಸಂಚಿಕೆ ೨೫

ಭಾಗ – ೫

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

ಕರ್ನಾಟಕ ಸರ್ಕಾರ

ಕಾರಾಗೃಹಗಳ ಇಲಾಖಾ ನೇಮಕಾತಿ ಸಮಿತಿ, ಬೆಂಗಳೂರು

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರ ಕಛೇರಿ ನಂ. 4,

ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು –560 009

ಅಧಿಸೂಚನೆ

ಸಂಖ್ಯೆ: ಇ4/ಸಿಆರ್ –23/2009–10, ದಿನಾಂಕ: 15–06–2011.

ವಿಷಯ: ಜೈಲರ್, ಎರಡನೇ ದರ್ಜೆ ಬೋಧಕರು ಮತ್ತು ವಾರ್ಡರ್ ಹುದ್ದೆಗಳಿಗೆ ಅರ್ಹತೆ ಆಧಾರದ ಮೇಲೆ ಆಯ್ಕೆ ಮಾಡುವ ಕುರಿತು.

ಕಾರಾಗೃಹಗಳ ಇಲಾಖೆಯಲ್ಲಿ ಜೈಲರ್, ಎರಡನೇ ದರ್ಜೆ ಬೋಧಕರು ಮತ್ತು ವಾರ್ಡರ್ ಹುದ್ದೆಗಳ ನೇಮಕಾತಿಗಾಗಿ ಕರ್ನಾಟಕ ಕಾರಾಗೃಹಗಳ ಸೇವೆಗಳು (ನೇಮಕಾತಿ) ನಿಯಮಗಳು 2002 ರ ಮತ್ತು ಅದರ ತಿದ್ದುಪಡಿ ನಿಯಮಗಳು 2007, 2010 ಹಾಗೂ ಮೇಲೆ ತಿಳಿಯಪಡಿಸಿದ ನಿಯಮಗಳಿಗೆ ಕಾಲಕಾಲಕ್ಕೆ ಆಗುವ ತಿದ್ದುಪಡಿಗಳ ಅನುಸಾರ ಅರ್ಹ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳಿಂದ ಆನ್‌ಲೈನ್ (On-line) ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. **ಅರ್ಜಿ ಪಡೆಯುವ ಮತ್ತು ಸಲ್ಲಿಸುವ ವಿಧಾನ: ಆನ್‌ಲೈನ್ (Online) ಮುಖಾಂತರ:**

(1) ಅಭ್ಯರ್ಥಿಯು ಇಲಾಖೆಯ ಅಧಿಕೃತ ವೆಬ್‌ಸೈಟ್ www.karnatakaprisons.kar.nic.in ಗೆ ಹೋಗಿ, ಮೊದಲಿಗೆ; 'ನೇಮಕಾತಿ/recruitment' ಅನ್ನುವ ಲಿಂಕ್ ಅನ್ನು ಕ್ಲಿಕ್ ಮಾಡಿ.

(2) ಮುಖ್ಯ ಮೆನುನಲ್ಲಿ **'ಹೊಸ ಅರ್ಜಿ'** ಲಿಂಕ್ ಅನ್ನು ಕ್ಲಿಕ್ ಮಾಡಿ ಅರ್ಜಿ ನಮೂನೆಯನ್ನು ಪಡೆದು ಅದರಲ್ಲಿ ಜೈಲರ್, 2ನೇ ದರ್ಜೆ ಬೋಧಕರು ಮತ್ತು ವಾರ್ಡರ್ ಹುದ್ದೆಗಳ ಪೈಕಿ ಯಾವ ಹುದ್ದೆಗೆ ಅರ್ಜಿ ಸಲ್ಲಿಸಲು ಬಯಸುವಿರೋ ಅದನ್ನು ಭರ್ತಿ ಮಾಡಬೇಕು. ನಂತರ;

(3) ಇಲಾಖೆಯು ಲಿಖಿತ ಪರೀಕ್ಷೆ ನಡೆಸುವ ಪರೀಕ್ಷಾ ಕೇಂದ್ರಗಳಾದ ಬೆಂಗಳೂರು, ಬೆಳಗಾವಿ, ಮೈಸೂರು, ಗುಲ್ಬರ್ಗಾ, ಬಳ್ಳಾರಿ, ಬಿಜಾಪುರ, ಮಂಗಳೂರು ಇವುಗಳ ಪೈಕಿ ಯಾವ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಬಯಸುವಿರೋ ಆ ಕೇಂದ್ರವನ್ನು ಜಾಗರೂಕತೆಯಿಂದ ಭರ್ತಿ ಮಾಡಬೇಕು. ನಂತರ;

(4) ಅಭ್ಯರ್ಥಿಯ ಪೂರ್ಣ ಹೆಸರು, ವರ್ಗ, ಗುಂಪು, ಹುಟ್ಟಿದ ದಿನಾಂಕ, ಲಿಂಗ, ತಾಯಿಯ ಹೆಸರು, ತಂದೆಯ ಹೆಸರು, ವಿದ್ಯಾರ್ಹತೆಗಳನ್ನು ತುಂಬಬೇಕು. ಈ ಮಾಹಿತಿಗಳನ್ನು ತುಂಬಿದ ನಂತರ **"ಪ್ರಿಂಟ್ ದಿ ಚಲನ್"** (Print the challan) ಆಯ್ಕೆ ಮಾಡತಕ್ಕದ್ದು. ಅಭ್ಯರ್ಥಿಯು ನೀಡಿದ ಮಾಹಿತಿಯ ಆಧಾರದ ಮೇಲೆ ಅರ್ಜಿ ಸಲ್ಲಿಸಲು ಅರ್ಹರಾಗಿದ್ದಲ್ಲಿ ಮಾತ್ರ ತ್ರಿಪ್ರತಿ (Triplicate) ಚಲನ್ ತಯಾರಾಗುತ್ತದೆ ಹಾಗೂ ಅರ್ಜಿ ಸಂಖ್ಯೆಯು ಸೃಜನೆಯಾಗುತ್ತದೆ. ಈ ಅರ್ಜಿಯ ಸಂಖ್ಯೆಯು ಮುಂದಿನ ನೇಮಕಾತಿ ಪ್ರಕ್ರಿಯೆಯ ಎಲ್ಲಾ ಹಂತಗಳಲ್ಲಿ ಅವಶ್ಯಕವಾಗಿರುತ್ತದೆ. ಅರ್ಜಿಯ ಸಂಖ್ಯೆಯೊಂದಿಗೆ ಚಲನ್‌ನ ತ್ರಿಪ್ರತಿಯನ್ನು ಡೌನ್‌ಲೋಡ್ (Download) ಮಾಡಿಕೊಂಡು ಪ್ರಿಂಟ್ ಔಟ್ (Print out) ತೆಗೆದುಕೊಳ್ಳಬೇಕು. ಚಲನ್‌ನಲ್ಲಿ

ನಮೂದಿಸಿರುವ ಪರೀಕ್ಷಾ ಶುಲ್ಕವನ್ನು ನಗದು ರೂಪದಲ್ಲಿ ಹತ್ತಿರವಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ಬ್ಯಾಂಕ್ ಶಾಖೆಯಲ್ಲಿ ಚಲನ್ ಮುಖಾಂತರ ಪಾವತಿಸಬೇಕು. ಹಣ ಪಾವತಿಸಿದ ನಂತರ ಬ್ಯಾಂಕ್‌ನವರು ಜರ್ನಲ್ ನಂಬರನ್ನು ನೀಡುವರು. ಪುನ: ಇಲಾಖೆಯ ಅಧಿಕೃತ ವೆಬ್‌ಸೈಟ್ www.karnatakaprisons.kar.nic.in ನಲ್ಲಿ ಅರ್ಜಿ ಸಂಖ್ಯೆ ಮತ್ತು ಜನ್ಮ ದಿನಾಂಕ ನಮೂದಿಸಿದ ನಂತರ ಅರ್ಜಿ ನಮೂನೆ (application form) ತೆರೆಯುತ್ತದೆ.

(5) ಅಭ್ಯರ್ಥಿಗಳು Online ಮುಖಾಂತರ ಕಂಪ್ಯೂಟರ್ ಪರದೆಯ ಮೇಲೆಯೇ ಪೂರ್ಣ ಅರ್ಜಿಯನ್ನು (complete) ತುಂಬಬೇಕು. ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅಭ್ಯರ್ಥಿಯು ಒಂದು ಬಿಳಿ ಹಾಳೆಯ ಮೇಲೆ ಪಾಸ್‌ಪೋರ್ಟ್ ಅಳತೆಯ (5 ಸೆಂಟಿ ಮೀಟರ್ x 4 ಸೆಂಟಿ ಮೀಟರ್) ಬಣ್ಣದ / ಕಪ್ಪು ಬಿಳಿ ಭಾವಚಿತ್ರವನ್ನು ಅಂಟಿಸಬೇಕು. ಮತ್ತೊಂದು ಬಿಳಿ ಹಾಳೆಯ ಮೇಲೆ ಕಪ್ಪು ಶಾಯಿಯಲ್ಲಿ ಸಹಿ ಮಾಡಿ ಭಾವಚಿತ್ರ ಮತ್ತು ಸಹಿ ಎರಡೂ jpeg/gif ನಮೂನೆಯಲ್ಲಿ ಪ್ರತ್ಯೇಕವಾಗಿ ಸ್ಕ್ಯಾನ್ ಮಾಡಿ ಇಟ್ಟುಕೊಂಡಿರಬೇಕು. ಸ್ಕ್ಯಾನ್ ಮಾಡಿದ ಫೈಲ್‌ನ ಗಾತ್ರ ಒಂದೊಂದೂ 100ಕೆ.ಬಿ. ಮೀರದಂತಿರಬೇಕು (soft copy of each file size should be less than 100 kb) ಸ್ಕ್ಯಾನ್ ಮಾಡಿಟ್ಟುಕೊಂಡಿರುವ ಭಾವಚಿತ್ರ ಮತ್ತು ಸಹಿಯನ್ನು ಕಂಪ್ಯೂಟರ್ ಮುಖೇನ ಮೇಲೆ ಕಾಣಿಸಿದ ವೆಬ್‌ಸೈಟ್‌ಗೆ ಅಪ್‌ಲೋಡ್ ("upload photo" ಮತ್ತು "upload signature") ಮಾಡುವುದು.

ಸೂಚನೆ:– ಫೈಲ್ ಗಾತ್ರ 100 ಕೆ.ಬಿ.ಗಿಂತ ಹೆಚ್ಚಿದ್ದಲ್ಲಿ ಫೋಟೋ ಮತ್ತು ಸಹಿ ಅಪ್‌ಲೋಡ್ ಆಗುವುದಿಲ್ಲ ಮತ್ತು ಅರ್ಜಿ ರವಾನೆಯಾಗುವುದಿಲ್ಲ.

(6) ಅಭ್ಯರ್ಥಿಗಳು ಭಾವಚಿತ್ರಗಳನ್ನು ವೆಬ್ ಕ್ಯಾಮೆರಾ ಮುಖಾಂತರ ಸಹ ಅಪ್‌ಲೋಡ್ ಮಾಡಬಹುದಾಗಿದ್ದು, ಈ ಬಗ್ಗೆ ಸೂಚನೆಗಳನ್ನು ಪ್ರತ್ಯೇಕವಾಗಿ ನೀಡಲಾಗಿದೆ.

(7) **ಭರ್ತಿ ಮಾಡಿದ ಆನ್‌ಲೈನ್ ಅರ್ಜಿಯ ಪ್ರತಿಯನ್ನು ಪ್ರಿಂಟ್ ಔಟ್ ತೆಗೆದು ಭದ್ರವಾಗಿ ಇಟ್ಟುಕೊಳ್ಳತಕ್ಕದ್ದು.**

(8) ಅಭ್ಯರ್ಥಿಗಳು ದಿನಾಂಕ:**22–06–2011**ರಂದು ಬೆಳಿಗ್ಗೆ 10.00 ಗಂಟೆಯಿಂದ ದಿನಾಂಕ:**22–07–2011** ರ ಮಧ್ಯಾಹ್ನ 14.00 ಗಂಟೆಯರೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

2) ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಉದ್ದೇಶಿಸಿರುವ ಈ ಕೆಳಗೆ ನಮೂದಿಸಿರುವ ಖಾಲಿ ಹುದ್ದೆಗಳ ಸಂಖ್ಯೆಯು ತಾತ್ಕಾಲಿಕವಾಗಿದ್ದು ಅವಶ್ಯಕತೆ ಹಾಗೂ ಸಂದರ್ಭಕ್ಕೆ ಅನುಗುಣವಾಗಿ ಮುನ್ಸೂಚನೆಯಿಲ್ಲದೆ ಬದಲಾವಣೆಗೊಳಪಟ್ಟಿರುತ್ತದೆ.

ಕ್ರಮ ಸಂಖ್ಯೆ	**ಹುದ್ದೆಯ ಹೆಸರು**	**ವೇತನ ಶ್ರೇಣಿ**	**ಖಾಲಿ ಹುದ್ದೆಗಳ ಸಂಖ್ಯೆ**
1	ಜೈಲರ್	8825–225–9500–250–10500–300–12300–350–14400–400–16000	22
2	ಎರಡನೇ ದರ್ಜೆ ಬೋಧಕರು	6250–125–6500–150–7100–175–7800–200–8600–225–9500–250–10500–300–12000	25
3	ವಾರ್ಡರ್	5800–100–6000–125–6500–150–7100–175–7800–200–8600–225–9500–250–10500	417

ನೇರ ನೇಮಕಾತಿಯಿಂದ ಭರ್ತಿ ಮಾಡಲು ಉದ್ದೇಶಿಸಿರುವ 25 ಸಂಖ್ಯೆ 2ನೇ ದರ್ಜೆ ಬೋಧಕರ ಹುದ್ದೆಗೆ ವೃತ್ತಿಪರ ವರ್ಗೀಕರಣ ಕೆಳಕಂಡಂತಿದೆ:–

ಕ.ಸಂಖ್ಯೆ	**ಹುದ್ದೆಯ ಹೆಸರು**	**ಹುದ್ದೆಗಳ ಸಂಖ್ಯೆ**
1.	ಮರಗೆಲಸದ ಬೋಧಕರು	06
2.	ಸ್ಮಿತಿ (ಕುಲುಮೆ) ಬೋಧಕರು	01
3.	ಎಲೆಕ್ಟ್ರಿಷಿಯನ್ ಬೋಧಕರು	03
4.	ಅಪೇರಲ್ ಡಿಸೈನಿಂಗ್ ಅಂಡ್ ಫ್ಯಾಬ್ರಿಕ್ ಟೆಕ್ನಾಲಜಿ ಬೋಧಕರು (ಎ.ಡಿ.ಎಫ್.ಟಿ) ಸಿದ್ದ ಉಡುಪು ವಿನ್ಯಾಸ ಮತ್ತು ವಸ್ತ್ರ ತಂತ್ರಜ್ಞಾನ ಬೋಧಕರು	03
5.	ಚರ್ಮ ಕೈಗಾರಿಕೆ ಬೋಧಕರು	02
6.	ಕಂಪ್ಯೂಟರ್ ನೆಟ್‌ವರ್ಕಿಂಗ್ ಇಂಜಿನಿಯರಿಂಗ್ ಬೋಧಕರು	02
7.	ನೇಯ್ಗೆ ಬೋಧಕರು (ವೀವಿಂಗ್)	04
8.	ಪ್ಲಂಬಿಂಗ್ ಬೋಧಕರು	04
	ಒಟ್ಟು	**25**

ಮೇಲಿನ ಹುದ್ದೆಗಳ ಸಂಖ್ಯೆಯು ತಾತ್ಕಾಲಿಕವಾಗಿದ್ದು ಅವಶ್ಯಕತೆ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಮುನ್ಸೂಚನೆ ಇಲ್ಲದೆ ಬದಲಾವಣೆಗೊಳಪಟ್ಟಿರುತ್ತದೆ.

ಸೂಚನೆ: ಜೈಲರ್, ಎರಡನೇ ದರ್ಜೆ ಬೋಧಕರು ಮತ್ತು ವಾರ್ಡರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಲಿಚ್ಛಿಸುವ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸತಕ್ಕದ್ದು.

3) ಜೈಲರ್, ಎರಡನೇ ದರ್ಜೆ ಬೋಧಕರು ಮತ್ತು ವಾರ್ಡರ್ ಹುದ್ದೆಗಳ ವರ್ಗೀಕರಣ ಈ ಕೆಳಕಂಡಂತಿದೆ.

1) ಜೈಲರ್:

ವರ್ಗ	ಒಟ್ಟು ಹುದ್ದೆಗಳ ಸಂಖ್ಯೆ	ಮಹಿಳಾ ಅಭ್ಯರ್ಥಿ	ಕನ್ನಡ ಮಾಧ್ಯಮ ವ್ಯಾಸಂಗ ಮಾಡಿದ ಅಭ್ಯರ್ಥಿ	ಮಾಜಿ ಸೈನಿಕರು	ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಇತರರು
ಸಾಮಾನ್ಯ ವರ್ಗ	11	3	1	1	–	4	2
ಪರಿಶಿಷ್ಟ ಜಾತಿ	3	1	–	–	–	1	1
ಪರಿಶಿಷ್ಟ ಪಂಗಡ	1	–	–	–	–	–	1
ಪ್ರವರ್ಗ– 1	1	–	–	–	–	–	1
ಪ್ರವರ್ಗ– 2ಎ	4	1	–	–	–	2	1
ಪ್ರವರ್ಗ– 2ಬಿ	1	1	–	–	–	–	–
ಪ್ರವರ್ಗ– 3ಎ	–	–	–	–	–	–	–
ಪ್ರವರ್ಗ– 3ಬಿ	1	–	–	–	–	–	1
ಒಟ್ಟು	**22**	**6**	**1**	**1**	–	**7**	**7**

2) II ನೇ ದರ್ಜೆ ಬೋಧಕರು:

ವರ್ಗ	ಒಟ್ಟು ಹುದ್ದೆಗಳ ಸಂಖ್ಯೆ	ಮಹಿಳಾ ಅಭ್ಯರ್ಥಿ	ಕನ್ನಡ ಮಾಧ್ಯಮ ವ್ಯಾಸಂಗ ಮಾಡಿದ ಅಭ್ಯರ್ಥಿ	ಮಾಜಿ ಸೈನಿಕರು	ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಇತರರು
ಸಾಮಾನ್ಯ ವರ್ಗ	12	4	–	1	–	3	4
ಪರಿಶಿಷ್ಟ ಜಾತಿ	4	1	–	–	–	1	2
ಪರಿಶಿಷ್ಟ ಪಂಗಡ	1	–	–	–	–	–	1
ಪ್ರವರ್ಗ– 1	1	–	–	–	–	–	1
ಪ್ರವರ್ಗ– 2ಎ	4	1	–	–	–	1	2
ಪ್ರವರ್ಗ– 2ಬಿ	1	–	–	–	–	–	1
ಪ್ರವರ್ಗ– 3ಎ	1	–	–	–	–	–	1
ಪ್ರವರ್ಗ– 3ಬಿ	1	–	–	–	–	–	1
ಒಟ್ಟು	**25**	**6**	–	**1**	–	**5**	**13**

3) ವಾರ್ಡರ್:

ವರ್ಗ	ಒಟ್ಟು ಹುದ್ದೆಗಳ ಸಂಖ್ಯೆ	ಮಹಿಳಾ ಅಭ್ಯರ್ಥಿ	ಕನ್ನಡ ಮಾಧ್ಯಮ ವ್ಯಾಸಂಗ ಮಾಡಿದ ಅಭ್ಯರ್ಥಿ	ಮಾಜಿ ಸೈನಿಕರು	ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಇತರರು
ಸಾಮಾನ್ಯ ವರ್ಗ	208	63	11	20	11	52	51
ಪರಿಶಿಷ್ಟ ಜಾತಿ	63	19	3	7	3	15	16
ಪರಿಶಿಷ್ಟ ಪಂಗಡ	12	3	1	2	1	3	2
ಪ್ರವರ್ಗ– 1	17	5	1	1	1	4	5
ಪ್ರವರ್ಗ– 2ಎ	62	19	3	6	3	15	16
ಪ್ರವರ್ಗ– 2ಬಿ	17	5	1	1	1	4	5
ಪ್ರವರ್ಗ– 3ಎ	17	5	1	1	1	4	5
ಪ್ರವರ್ಗ– 3ಬಿ	21	6	2	2	1	5	5
ಒಟ್ಟು	**417**	**125**	**23**	**40**	**22**	**102**	**105**

4) ಕನ್ನಡ ಮಾಧ್ಯಮ, ಮಾಜಿ ಸೈನಿಕರು, ಯೋಜನೆಗಳಿಂದ ನಿರಾಶ್ರಿತಗೊಂಡ, ಗ್ರಾಮೀಣ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಈ ಖಾಲಿ ಹುದ್ದೆಗಳನ್ನು ಮೇಲೆ ನಮೂದಿಸಿದ ಪ್ರವರ್ಗದ ಇತರ ಅಭ್ಯರ್ಥಿಗಳಿಂದ ತುಂಬಲಾಗುವುದು ಹಾಗೂ ಮಹಿಳಾ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಆ ಖಾಲಿ ಹುದ್ದೆಗಳನ್ನು ಆಯಾ ವರ್ಗಕ್ಕೆ ಸೇರಿದ ಪುರುಷ ಅಭ್ಯರ್ಥಿಗಳಿಂದ ತುಂಬಲಾಗುವುದು.

5) ಈ ಆಯ್ಕೆ ನೇಮಕಾತಿಯು ಕರ್ನಾಟಕ ಕಾರಾಗೃಹಗಳ ಸೇವೆಗಳು (ನೇಮಕಾತಿ) ನಿಯಮಗಳು 2002, ಮತ್ತು ಅದರ ತಿದ್ದುಪಡಿ ನಿಯಮ – 2007, 2010 ಹಾಗೂ ಕೆ.ಸಿ.ಎಸ್. (ಸಾಮಾನ್ಯ ನೇಮಕಾತಿ) ನಿಯಮಾವಳಿ 1977 ಹಾಗೂ ಮೇಲೆ ತಿಳಿಯಪಡಿಸಿದ ನಿಯಮಗಳಿಗೆ ಕಾಲಕಾಲಕ್ಕೆ ಆಗುವ ತಿದ್ದುಪಡಿಗಳ ಮೇರೆಗೆ ಆಯಾ ಹುದ್ದೆಗೆ ಅನುಗುಣವಾಗಿ ಅನುಸರಿಸಲಾಗುವುದು.

6) ವಯೋಮಿತಿ: ಜೈಲರ್, ಎರಡನೇ ದರ್ಜೆ ಬೋಧಕರು ಮತ್ತು ವಾರ್ಡರ್ ಹುದ್ದೆಗೆ:

ಅರ್ಜಿ ಸಲ್ಲಿಸಲು ನಿಗಧಿಪಡಿಸಲಾದ ಕೊನೆಯ ದಿನಾಂಕದಂದು (ಅಂದರೆ ದಿನಾಂಕ **22–07–2011** ಕ್ಕೆ) ಅಭ್ಯರ್ಥಿಗೆ ಕನಿಷ್ಠ 20 ವರ್ಷ ವಯಸ್ಸಾಗಿರಬೇಕು ಮತ್ತು ಗರಿಷ್ಠ ವಯೋಮಿತಿ 1) GM 26 ವರ್ಷಗಳು 2) ವರ್ಗ I, 2A, 2B, 3A, 3B, SC & ST ಗೆ 28 ವರ್ಷಗಳು ಮತ್ತು (ಮಾಜಿ ಸೈನಿಕ ಅಭ್ಯರ್ಥಿಯು ಸೈನ್ಯ ವಿಯೋಜನೆ, ಸೇವೆಯಿಂದ ತೆಗೆದು ಹಾಕಿದ ಹಾಗೂ ಸೇವಾ ನಿವೃತ್ತಿ ಹೊಂದಿದ ಕಾರಣದಿಂದ ಬಿಡುಗಡೆಯಾದ ಮಾಜಿ ಯೋಧರಾಗಿದ್ದಲ್ಲಿ ಅವರಿಗೆ ಅವರು ಸೇವೆ ಸಲ್ಲಿಸಿದ ಅವಧಿಯಷ್ಟು ಸಡಿಲಿಕೆ ಮಾಡಲಾಗುವುದು.

7) ವಿದ್ಯಾರ್ಹತೆ:–

ಅ. **ಜೈಲರ್ ಹುದ್ದೆಗೆ :** ಜೈಲರ್ ಹುದ್ದೆಗೆ ಕನಿಷ್ಠ ಯಾವುದಾದರೂ ಒಂದು ಬ್ಯಾಚುಲರ್ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು ಸೋಶಿಯಾಲಜಿ ಅಥವಾ ಸೈಕಾಲಜಿ ಅಥವಾ ಕ್ರಿಮಿನಾಲಜಿ ಅಥವಾ ಕರೆಕ್ಷನಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಅಥವಾ ತತ್ಸಮಾನ ವಿಷಯದಲ್ಲಿ ಬ್ಯಾಚುಲರ್ ಪದವಿ ಪಡೆದವರಿಗೆ ಆದ್ಯತೆ ನೀಡಲಾಗುವುದು.

ಆ. **2ನೇ ದರ್ಜೆ ಬೋಧಕರ ಹುದ್ದೆಗೆ :**

ಅ) ಎರಡನೇ ದರ್ಜೆ ಬೋಧಕ ಹುದ್ದೆಗೆ ಎಸ್.ಎಸ್.ಎಲ್.ಸಿ / 10ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.

ಆ) (ಮೆಕ್ಯಾನಿಕಲ್/ಎಲೆಕ್ಟ್ರಿಕಲ್/ಮರಗೆಲಸ/ಹೊಲಿಗೆ/ಟೆಕ್ಸ್‌ಟೈಲ್/ನೇಯಿಗೆ/ಕಾರ್‌ಪೆಟ್ ತಯಾರಿಕೆ ಮುಂತಾದ ವೃತ್ತಿಪರ) ಡಿಪ್ಲೋಮಾ ಪದವಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯು ನೀಡಿದ ಪ್ರಮಾಣ ಪತ್ರ ಹೊಂದಿರತಕ್ಕದ್ದು.

ಇ. **ವಾರ್ಡರ್ ಹುದ್ದೆಗೆ :** ವಾರ್ಡರ್ ಹುದ್ದೆಗೆ S.S.L.C./10ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.

8) **ಲಿಖಿತ ಪರೀಕ್ಷೆ :**

ಅ) ಜೈಲರ್ ಹುದ್ದೆಗೆ ಸಂಬಂಧಿಸಿದಂತೆ ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ 100 ಅಂಕಗಳಿಗೆ ವಸ್ತುನಿಷ್ಠ (ಆಬ್ಜೆಕ್ಟಿವ್) ಮಾದರಿಯಾದ ಬಹುವಿಧ ಆಯ್ಕೆಯ ಪ್ರಶ್ನೆಗಳಿದ್ದು ಇವು ಸಾಮಾನ್ಯ ಜ್ಞಾನ, ವಿಜ್ಞಾನ, ಭೂಗೋಳ, ಇತಿಹಾಸ, ಸಂವಿಧಾನ, ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿ ಇತ್ಯಾದಿ ವಿಷಯಗಳಲ್ಲಿ ಲಿಖಿತ ಪರೀಕ್ಷೆಯಾಗಿರುತ್ತದೆ. ಈ ಪರೀಕ್ಷೆಯ ಅವಧಿ ಒಂದೂವರೆ ಗಂಟೆಯದ್ದಾಗಿರುತ್ತದೆ.

ಆ) ವಾರ್ಡರ್ / ಎರಡನೇ ದರ್ಜೆ ಬೋಧಕರು ಹುದ್ದೆಗೆ ಸಂಬಂಧಿಸಿದಂತೆ ಕನ್ನಡ / ಆಂಗ್ಲ ಭಾಷೆಯಲ್ಲಿ 100 ಅಂಕಗಳಿಗೆ ವಸ್ತುನಿಷ್ಠ (ಆಬ್ಜೆಕ್ಟಿವ್) ಮಾದರಿಯಾದ ಬಹುವಿಧ ಆಯ್ಕೆಯ ಪ್ರಶ್ನೆಗಳ ಲಿಖಿತ ಪರೀಕ್ಷೆಯಾಗಿರುತ್ತದೆ. ಈ ಪರೀಕ್ಷೆಯ ಅವಧಿ ಒಂದೂವರೆ ಗಂಟೆಯದ್ದಾಗಿರುತ್ತದೆ.

ಇ) ಜೈಲರ್ ಮತ್ತು ವಾರ್ಡರ್ /ಎರಡನೇ ದರ್ಜೆ ಬೋಧಕರು ಹುದ್ದೆಗಳಿಗೆ ಪರೀಕ್ಷೆಗಳನ್ನು ಮುಂದೆ ಪ್ರಕಟಿಸುವ ದಿನಾಂಕಗಳಲ್ಲಿ ಈ ಕೆಳಗೆ ನಮೂದಿಸಿದ ಸ್ಥಳಗಳಲ್ಲಿ ನಡೆಸಲಾಗುವುದು. ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಪಡೆದ ಶೇಕಡಾವಾರು ಅಂಕಗಳನ್ನು ಮತ್ತು ಅವರು ಅರ್ಹತಾ (qualifying) ಪರೀಕ್ಷೆಯಲ್ಲಿ ಪಡೆದ ಶೇಕಡಾವಾರು ಅಂಕಗಳನ್ನೂ ಕೂಡಿ ಅದರ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಲಾಗುವುದು. ಈ ಅರ್ಹ ಅಭ್ಯರ್ಥಿಗಳ ಪಟ್ಟಿಯಿಂದ ಪ್ರತಿ ವರ್ಗದಲ್ಲಿ 1:5ರ ಪ್ರಮಾಣದಲ್ಲಿ ದೇಹದಾರ್ಢ್ಯತೆ ಹಾಗೂ ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಅಭ್ಯರ್ಥಿಗಳನ್ನು ಕೆಳಕಂಡ ಸ್ಥಳಗಳಲ್ಲಿ ಕರೆಯಲಾಗುವುದು.

1) ಬೆಂಗಳೂರು, 2) ಬೆಳಗಾವಿ, 3) ಮೈಸೂರು, 4) ಗುಲ್ಬರ್ಗಾ, 5) ಬಳ್ಳಾರಿ, 6) ಬಿಜಾಪುರ ಮತ್ತು 7) ಮಂಗಳೂರು

ಈ) **ಲಿಖಿತ ಪರೀಕ್ಷೆಗೆ ಹಾಜರಾಗುವಾಗ ಅಭ್ಯರ್ಥಿಗಳು i) ಕರೆಪತ್ರ ii) ಆನ್‌ಲೈನ್ ಅರ್ಜಿಯ ಹಾರ್ಡ್‌ಕಾಪಿ ಹಾಗೂ iii) ಹಣ ಪಾವತಿಸಿದ ಬಗ್ಗೆ ಬ್ಯಾಂಕ್ ಚಲನ್‌ಗಳನ್ನು ತರತಕ್ಕದ್ದು. ತಪ್ಪಿದಲ್ಲಿ ಲಿಖಿತ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಲಾಗುವುದಿಲ್ಲ.**

ಎಫ್) ಲಿಖಿತ ಪರೀಕ್ಷೆಯ ಕರೆಪತ್ರವನ್ನು ಅಭ್ಯರ್ಥಿಗಳು ಈ ಇಲಾಖೆಯ ಅಧಿಕೃತ ವೆಬ್‌ಸೈಟ್ **www.karnatakaprisons.kar.nic.in** ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಈ ಸಂಬಂಧ ಪರೀಕ್ಷೆಯ ದಿನಾಂಕ, ವೇಳೆ ಮತ್ತು ಸ್ಥಳಗಳನ್ನು ನಿಗದಿಪಡಿಸಿದ ತರುವಾಯ ಕರೆಪತ್ರಗಳನ್ನು ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಲಾಗುವುದು. ಮತ್ತು ಈ ಬಗ್ಗೆ ಮಾಧ್ಯಮಗಳ ಮೂಲಕ ಮತ್ತು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಲಿಖಿತ ಪರೀಕ್ಷೆಯು ನಡೆಯುವ ದಿನಾಂಕ, ವೇಳೆ ಮತ್ತು ಸ್ಥಳವನ್ನು ಮುಂದೆ ಸಂಬಂಧಪಟ್ಟ ಕೇಂದ್ರಗಳ ಸೂಚನಾ ಫಲಕದಲ್ಲಿಯೂ ಸಹ ಪ್ರಕಟಿಸಲಾಗುವುದು.

ಜಿ) ಅಭ್ಯರ್ಥಿಗಳು ಲಿಖಿತ ಪರೀಕ್ಷೆಗೆ ನಿಗದಿಪಡಿಸಿರುವ ಸಮಯಕ್ಕಿಂತ ಅರ್ಧಗಂಟೆ ಮುಂಚಿತವಾಗಿ ಪರೀಕ್ಷಾ ಕೇಂದ್ರದಲ್ಲಿ ಹಾಜರಿರತಕ್ಕದ್ದು.

ಹೆಚ್) ಪರೀಕ್ಷಾ ಕೇಂದ್ರದಲ್ಲಿ ಮೊಬೈಲ್ ಫೋನ್‌ಗಳು, ಪೇಜರ್, ಕ್ಯಾಲ್ಕ್ಯುಲೇಟರ್ ಇತ್ಯಾದಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷಾ ಕೊಠಡಿಗೆ ತೆಗೆದುಕೊಂಡು ಬರುವುದನ್ನು ನಿಷೇಧಿಸಿದೆ.

9) ದೇಹದಾರ್ಢ್ಯತೆ:

ಜೈಲರ್, ಎರಡನೇ ದರ್ಜೆ ಬೋಧಕರು ಮತ್ತು ವಾರ್ಡರ್ ಹುದ್ದೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ದೇಹದಾರ್ಢ್ಯತೆ ಹೊಂದಿದವರು ಮಾತ್ರ ಅರ್ಜಿ ಸಲ್ಲಿಸಬೇಕು.

ಅಳತೆ	ಪುರುಷ ಅಭ್ಯರ್ಥಿಗಳಿಗೆ	ಮಹಿಳಾ ಅಭ್ಯರ್ಥಿಗಳಿಗೆ
ಎತ್ತರ	168 ಸೆಂ.ಮೀ.,	157 ಸೆಂ.ಮೀ.,
ಎದೆ ಸುತ್ತಳತೆ	ಪೂರ್ಣ ಉಸಿರೆಳೆದಾಗ ಎದೆಯ ಸುತ್ತಳತೆ ಕನಿಷ್ಠ 86 ಸೆ.ಮೀ. ಗಳಷ್ಟಿದ್ದು ಕನಿಷ್ಠ 5 ಸೆ.ಮೀ. ಗಳಷ್ಟು ವಿಸ್ತರಣೆ ಹೊಂದಿರಬೇಕು.	ಅನ್ವಯಿಸುವುದಿಲ್ಲ
ತೂಕ	ಅನ್ವಯಿಸುವುದಿಲ್ಲ.	46 ಕೆ.ಜಿ.
ದೃಷ್ಟಿ	ಉತ್ತಮ ಕನಿಷ್ಠ 1. ದೂರದೃಷ್ಟಿ 6/9 6/9 6/9 ಅಥವಾ 6/12 2. ಸಮೀಪ ದೃಷ್ಟಿ 0/6 0/8 ಪ್ರತಿ ಕಣ್ಣು ಸಂಪೂರ್ಣ ಕ್ಷೇತ್ರ ದೃಷ್ಟಿ ಹೊಂದಿರಲೇಬೇಕು. ವರ್ಣಾಂಧತೆ, ಮೆಳ್ಳಗಣ್ಣು ಅಥವಾ ಯಾವುದೇ ಕಣ್ಣಿನ ಅಥವಾ ರೆಪ್ಪೆಯ ವಿಕೃತ ಸ್ಥಿತಿಯನ್ನು ಅನರ್ಹತೆ ಎಂದು ಪರಿಗಣಿಸಲಾಗುವುದು.	
ಶ್ರವಣ ಶಕ್ತಿ	(1) ರಿನ್ನೇಸ್ ಪರೀಕ್ಷೆ (2) ವೆಬ್ಬರ್ಸ್ ಪರೀಕ್ಷೆ (3) ವೆರ್ಟಿಗೋ ಪರೀಕ್ಷೆ ಮೇಲಿನ ಪರೀಕ್ಷೆಗಳಲ್ಲಿ ಯಾವುದೇ ನ್ಯೂನತೆಗಳು ಕಂಡುಬಂದಲ್ಲಿ ಅನರ್ಹತೆ ಎಂದು ಪರಿಗಣಿಸಲಾಗುವುದು.	

ಕೆಳಕಂಡವುಗಳು ದೈಹಿಕ ಅನರ್ಹತೆಗಳಾಗಿರುತ್ತವೆ:

1) ತಾಗುಮಂಡಿ (Knock-Knees), (2) ಬಾಗಿದ ಕಾಲುಗಳು (Bow legs), 3) ಚಪ್ಪಟೆ ಪಾದ (flat feet),

4) ಅಪಧಮನಿ ಊತ (Varicose veins), 5) ಮಾತಿನಲ್ಲಿ ಅಡಚಣೆ (ಗುಕ್ಕಿಸುವುದು) (Speech impediment).

10) ದೈಹಿಕ ಸಾಮರ್ಥ್ಯ ಪರೀಕ್ಷೆ:–

ಈ ಕೆಳಕಂಡ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಲಾಗುವುದು.

ಪುರುಷ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ

ಅಂಶಗಳು	ಅರ್ಹತಾ ವೇಳೆ / ದೂರ
100 ಮೀಟರ್ ಓಟ	15 ಸೆಕೆಂಡುಗಳು
ಎತ್ತರ ಜಿಗಿತ (High jump)	1.20 ಮೀಟರ್
ಉದ್ದ ಜಿಗಿತ (Long jump)	3.80 ಮೀಟರ್
ಗುಂಡೆಸೆತ (7.26 ಕಿಲೋ) (Shot put)	5.60 ಮೀಟರ್
800 ಮೀಟರ್ ಓಟ	2 ನಿಮಿಷ 50 ಸೆಕೆಂಡುಗಳು

ಮಹಿಳಾ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ

ಅಂಶಗಳು	ಅರ್ಹತಾ ವೇಳೆ / ದೂರ
100 ಮೀಟರ್ ಓಟ	18.5 ಸೆಕೆಂಡುಗಳು
ಎತ್ತರ ಜಿಗಿತ (High jump)	0.90 ಮೀಟರ್
ಉದ್ದ ಜಿಗಿತ (Long jump)	2.50 ಮೀಟರ್
ಗುಂಡೆಸೆತ (3.63 ಕಿಲೋ) (Shot put)	3.75 ಮೀಟರ್
200 ಮೀಟರ್ ಓಟ	40 ಸೆಕೆಂಡುಗಳು

ಅಭ್ಯರ್ಥಿಗಳು ಮೇಲಿನ 5 ದೈಹಿಕ ಸಾಮರ್ಥ್ಯ ಪರೀಕ್ಷೆಗಳ ಪೈಕಿ ಕನಿಷ್ಠ 3 ರಲ್ಲಿ ಉತ್ತೀರ್ಣರಾಗಬೇಕು. ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಅಂಕಗಳನ್ನು ನೀಡಲಾಗುವುದಿಲ್ಲ. ಇವು ಕೇವಲ ಅರ್ಹತೆಗೆ ಮಾತ್ರ ಸೀಮಿತವಾಗಿರುತ್ತದೆ. ದೈಹಿಕ ಸಾಮರ್ಥ್ಯ ಪರೀಕ್ಷೆ ಮುಗಿದ ನಂತರ ದೇಹದಾರ್ಢ್ಯತೆ ಮತ್ತು ದೈಹಿಕ ಅರ್ಹತೆ ಪರೀಕ್ಷೆಗಳನ್ನು ನಡೆಸಲಾಗುವುದು.

ಟಿಪ್ಪಣಿ : ದೈಹಿಕ ಸಾಮರ್ಥ್ಯ, ದೇಹದಾರ್ಢ್ಯತೆ ಹಾಗೂ ದೈಹಿಕ ಅರ್ಹತೆ ಪರೀಕ್ಷೆಯನ್ನು ಒಂದು ಸಮಿತಿಯು ನಡೆಸುವುದು. ಅಭ್ಯರ್ಥಿಗಳು ಸದರಿ ಪರೀಕ್ಷೆಯಲ್ಲಿ ಉತ್ತೀರ್ಣ / ಅನುತ್ತೀರ್ಣದ ತೀರ್ಮಾನವು ಸಮಿತಿಯ ಅಂತಿಮ ನಿರ್ಧಾರಕ್ಕೆ ಒಳಪಟ್ಟಿರುತ್ತದೆ. ಅರ್ಹತೆಯನ್ನು ಯಾವುದೇ ವೈದ್ಯಕೀಯ

ಪ್ರಮಾಣ ಪತ್ರದ ಆಧಾರದ ಮೇಲೆ ಪರಿಗಣಿಸಲಾಗುವುದಿಲ್ಲ. ದೈಹಿಕ ಸಾಮರ್ಥ್ಯ, ದೇಹದಾರ್ಢ್ಯತೆ ಹಾಗೂ ದೈಹಿಕ ಅರ್ಹತೆ ಪರೀಕ್ಷೆ ಪೂರ್ಣಗೊಂಡ ನಂತರ ಸಂಬಂಧಪಟ್ಟ ದಾಖಲೆಗೆ ಅಭ್ಯರ್ಥಿಗಳು ತಮ್ಮ ಸಹಿ ಹಾಕಬೇಕು.

11) ಮೌಖಿಕ ಪರೀಕ್ಷೆ:

ದೇಹದಾರ್ಢ್ಯತೆ, ದೈಹಿಕ ಸಾಮರ್ಥ್ಯ ಮತ್ತು ದೈಹಿಕ ಅರ್ಹತೆ ಪರೀಕ್ಷೆಯಲ್ಲಿ ತೇರ್ಗಡೆಯಾದ ಜೈಲರ್ ಹುದ್ದೆಯ ಅಭ್ಯರ್ಥಿಗಳಿಗೆ 1:3 ಪ್ರಮಾಣದಲ್ಲಿ 5 ಅಂಕಗಳ ಮೌಖಿಕ ಸಂದರ್ಶನ ನಡೆಸಲಾಗುವುದು. ಅರ್ಹ ಅಭ್ಯರ್ಥಿಗಳು ನೇಮಕಾತಿ ಸಮಿತಿಯ ಮುಂದೆ ಸಂದರ್ಶನಕ್ಕೆ ಹಾಜರಾಗಬೇಕಾಗುವುದು. ಈ ಮೌಖಿಕ ಪರೀಕ್ಷೆಯಲ್ಲಿ ಕನಿಷ್ಠ ಅಂಕಗಳು ಇರುವುದಿಲ್ಲ. ಅಭ್ಯರ್ಥಿಗಳು ಎಲ್ಲಾ ಮೂಲ ದಾಖಲಾತಿಗಳನ್ನು ಮೌಖಿಕ ಪರೀಕ್ಷೆ ಪ್ರಾರಂಭವಾಗುವ ಮುನ್ನ ಹಾಜರುಪಡಿಸಬೇಕು.

12) ಪ್ರಮಾಣ ಪತ್ರಗಳು

ಅಭ್ಯರ್ಥಿಗಳು ಈ ಕೆಳಕಂಡ ಪ್ರಮಾಣ ಪತ್ರಗಳನ್ನು ತಮ್ಮಲ್ಲಿ ಇಟ್ಟುಕೊಂಡಿದ್ದು, ಮೂಲ ದಾಖಲಾತಿಗಳ ಪರಿಶೀಲನೆಯ ಸಂದರ್ಭದಲ್ಲಿ ಸಮಿತಿಯ ಮುಂದೆ ಹಾಜರುಪಡಿಸತಕ್ಕದ್ದು.

1) ಜನ್ಮ ದಿನಾಂಕವನ್ನೊಳಗೊಂಡ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ/ ವರ್ಗಾವಣೆ ಪತ್ರ.

2) ಪದವಿ ಪರೀಕ್ಷೆಯ ಅಂಕಪಟ್ಟಿ / ಪದವಿ ಪ್ರಮಾಣ ಪತ್ರ (ಜೈಲರ್ ಹುದ್ದೆಗೆ)

3) ವಾಹನ ಚಾಲನೆಯಲ್ಲಿ ಹೆವಿ ಡ್ಯೂಟಿ ಪರವಾನಗಿ ಇದ್ದರೆ ಅದರ ಮೂಲ ಪ್ರತಿ.

4) ಡಿಪ್ಲೋಮಾ ಪರೀಕ್ಷೆಯ ಅಂಕಪಟ್ಟಿ / ಸರ್ಕಾರದ ಅಂಗೀಕೃತ ಸಂಸ್ಥೆಯಿಂದ ನಡತೆ ಪ್ರಮಾಣ ಪತ್ರ/ಅಂಕಪಟ್ಟಿ (2ನೇ ದರ್ಜೆ ಬೋಧಕರ ಹುದ್ದೆಗೆ)

5) ಸರ್ಕಾರಿ ಇಲಾಖೆಯಲ್ಲಿ / ರಾಜ್ಯ ಸರ್ಕಾರದ / ಕೇಂದ್ರ ಸರ್ಕಾರದ / ಸರ್ಕಾರದ ಯಾವುದೇ ಪ್ರಾಧಿಕಾರದಲ್ಲಿ / ರಾಜ್ಯ ಅಥವಾ ಕೇಂದ್ರ ಸರ್ಕಾರದ ಸಾರ್ವಜನಿಕ ಸ್ವಾಮ್ಯದ ಕಂಪನಿಗಳಲ್ಲಿ ಪ್ರಸ್ತುತ ಉದ್ಯೋಗಿಯಾಗಿದ್ದಲ್ಲಿ ಅಂತಹವರು ಇಲಾಖಾ ವತಿಯಿಂದ ಕರ್ತವ್ಯದಿಂದ ಬಿಡುಗಡೆ ಮಾಡುವ ಬಗೆ ಇಚ್ಛಾ ಅನುಮತಿ ಪತ್ರ.

6) ಕಂಪ್ಯೂಟರ್ ಪರಿಣತಿಯನ್ನು ಹೊಂದಿದವರಾಗಿದ್ದರೆ ಆ ಬಗ್ಗೆ ಪ್ರಮಾಣ ಪತ್ರ

7) ಜಾತಿ ಪ್ರಮಾಣ ಪತ್ರವನ್ನು ಈ ಕೆಳಕಂಡ ನಮೂನೆಗಳಲ್ಲಿ ಪಡೆದಿರತಕ್ಕದ್ದು (ಅನ್ವಯಿಸಿದಲ್ಲಿ ಮಾತ್ರ)

ಎ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್ ರಿಂದ ವಿತರಿಸಿದ ನಮೂನೆ "ಡಿ" ನಲ್ಲಿ

ಬಿ) ವರ್ಗ–1ರ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್ ರಿಂದ ವಿತರಿಸಿದ ನಮೂನೆ – "ಇ" ರಲ್ಲಿ.

ಸಿ) ವರ್ಗ–2 ಎ, 2 ಬಿ, 3ಎ ಮತ್ತು 3ಬಿ ರ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್ ರಿಂದ ವಿತರಿಸಿದ ನಮೂನೆ – "ಎಫ್"

ಸೂಚನೆ:– ಈ ಹುದ್ದೆಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ನಮೂನೆ – "ಎಫ್" ನಲ್ಲಿರುವ ಜಾತಿ ಪ್ರಮಾಣ ಪತ್ರವು ಕಡ್ಡಾಯವಾಗಿ ಐದು (5) ವರ್ಷಕ್ಕಿಂತ ಹಳೆಯದಾಗಿರಬಾರದು.

8) ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ ಮೀಸಲಾತಿ ಅಡಿಯಲ್ಲಿ ಆಯ್ಕೆಗೆ ಬಯಸಿದರೆ ಸರ್ಕಾರಿ ಅಧಿಸೂಚನೆ ಸಂಖ್ಯೆಯ ಡಿಪಿಎಆರ್ 23 ಎಸ್ಆರ್ಆರ್ 99, ದಿನಾಂಕ:23–11–2000 ರನ್ವಯ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 44 ಸೇನೆನಿ 2001, ದಿನಾಂಕ: 27–07–2001ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಯೋಜನಾ ನಿರಾಶ್ರಿತ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿರತಕ್ಕದ್ದು.

9) ಮಾಜಿ ಸೈನಿಕರಾಗಿದ್ದಲ್ಲಿ ಸಂಬಂಧಪಟ್ಟ ಘಟಕದಿಂದ ಡಿಸ್‌ಚಾರ್ಜ್ ಪ್ರಮಾಣ ಪತ್ರ (ಅನ್ವಯಿಸಿದಲ್ಲಿ ಮಾತ್ರ)

10) ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಯು ಕರ್ನಾಟಕ ಅಧಿಸೂಚನೆ ಸಂಖ್ಯೆ: ಸಿಆಸುಇ /08/ ಸೇನೆ/ 2001, ದಿನಾಂಕ: 13–02–2001, ರ ಪ್ರಕಾರ ತರಗತಿ 1 ರಿಂದ 10 ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಹೊಂದಿರುವವರು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ /96 ಸೇನೆನಿ /2005, ದಿನಾಂಕ:10–08–2005 ರಲ್ಲಿ ನಿಗದಿಪಡಿಸಿದ ನಮೂನೆ 2ರ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಶಾಲಾ ಮುಖ್ಯೋಪಾಧ್ಯಾಯರಿಂದ ಸಹಿ ಮಾಡಿಸಿ ಮತ್ತು ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಮಾಡಿಸಿದ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿರತಕ್ಕದ್ದು. (ನಮೂನೆ – 1) (ನಾನ್ ಕ್ರೀಮಿ ಲೇಯರ್) ಮತ್ತು ನಮೂನೆ– 2 ಇವುಗಳು ಗ್ರಾಮೀಣ ಮೀಸಲಾತಿ ಕೋರುವ ಸಾಮಾನ್ಯ ಅಭ್ಯರ್ಥಿಗಳಿಗೆ ಕಡ್ಡಾಯವಾಗಿರುತ್ತದೆ.)

ಅಂತೆಯೇ ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, 2ಬಿ, 3ಎ, 3ಬಿ ಸೇರಿದ ಅಭ್ಯರ್ಥಿಗಳು ನಮೂನೆ–2ರಲ್ಲಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದಿರತಕ್ಕದ್ದು.

11) ಕನ್ನಡ ಮಾಧ್ಯಮ ಅಭ್ಯರ್ಥಿಯು ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಬಗ್ಗೆ ಶಾಲಾ ಮುಖ್ಯೋಪಾಧ್ಯಾಯರಿಂದ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಮಾಡಿಸಿ ಮೊಹರಿನೊಂದಿಗೆ ಪ್ರಮಾಣ ಪತ್ರವನ್ನು ಪಡೆದಿರತಕ್ಕದ್ದು. (ಅನ್ವಯಿಸಿದಲ್ಲಿಮಾತ್ರ)

13) ಶುಲ್ಕ:

ಪ.ಜಾ/ಪ.ಪಂ./ಪ್ರವರ್ಗ–1ರ ಅಭ್ಯರ್ಥಿಗಳಿಗೆ ಮತ್ತು ಸಾಮಾನ್ಯ ವರ್ಗ, ಪ್ರವರ್ಗ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ, ಬ್ಯಾಂಕ್ ಸೇವಾ ಶುಲ್ಕವನ್ನು ಒಳಗೊಂಡಂತೆ ಜೈಲರ್, 2ನೇ ದರ್ಜೆ ಬೋಧಕರು ಮತ್ತು ವಾರ್ಡರ್ ಹುದ್ದೆಗಳಿಗೆ ಶುಲ್ಕ ಈ ಕೆಳಕಂಡಂತೆ ಇರುತ್ತದೆ.

ಜೈಲರ್ ಹುದ್ದೆಗೆ

ಪ.ಜಾ/ಪ.ಪಂ./ಪ್ರವರ್ಗ–1	25
ಇತರೆ	50

2ನೇ ದರ್ಜೆ ಬೋಧಕರ ಹುದ್ದೆಗೆ

ಪ.ಜಾ/ಪ.ಪಂ./ಪ್ರವರ್ಗ–1	25
ಇತರೆ	50

ವಾರ್ಡರ್ ಹುದ್ದೆಗೆ

ಪ.ಜಾ/ಪ.ಪಂ./ಪ್ರವರ್ಗ–1	25
ಇತರೆ	50

ಒಮ್ಮೆ ಪರೀಕ್ಷಾ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ನೇಮಕಾತಿ ಸಮಿತಿಯು ನಡೆಸುವ ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಮೇಲಿನ ಕಾಲಂಗಳಲ್ಲಿ ನಮೂದಿಸಿದಂತೆ ಅಭ್ಯರ್ಥಿಗೆ ಅನ್ವಯಿಸುವ ಶುಲ್ಕ ಮಾತ್ರ ಪಾವತಿಸತಕ್ಕದ್ದು.

14) ನೇಮಕಾತಿಗೆ ಅನರ್ಹತೆಗಳು:

1) ಈ ಕೆಳಗೆ ಕಾಣಿಸಿದವರಲ್ಲದ ಯಾವ ವ್ಯಕ್ತಿಯೂ ಈ ಅಧಿಸೂಚನೆಯಲ್ಲಿ ವಿವರಿಸಿದ ಹುದ್ದೆಗಳಿಗೆ ಅರ್ಹನಾಗಿರುವುದಿಲ್ಲ

(ಎ) ಭಾರತದ ಪೌರ ಅಥವಾ

(ಬಿ) ನೇಪಾಳದ ಪ್ರಜೆ ಅಥವಾ

(ಸಿ) ಭೂತಾನದ ಪ್ರಜೆ ಅಥವಾ

(ಡಿ) ಭಾರತದಲ್ಲಿ ಖಾಯಂ ಆಗಿ ನೆಲೆಸುವ ಉದ್ದೇಶದಿಂದ 1962 ಜನವರಿ 1ನೇ ದಿನಾಂಕಕ್ಕೆ ಮೊದಲು ಭಾರತಕ್ಕೆ ಬಂದಿರುವ ಟಿಬೆಟಿಯನ್ ನಿರಾಶ್ರಿತರ ಅಥವಾ

(ಇ) ಪಾಕಿಸ್ತಾನ, ಮ್ಯಾನ್ಮಾರ (ಬರ್ಮಾ), ಶ್ರೀಲಂಕಾ ಅಥವಾ ಆಫ್ರಿಕಾದ ರಾಷ್ಟ್ರಗಳಾದ ಕೀನ್ಯಾ, ಉಗಾಂಡಾ, ತಾಂಜಾನಿಯಾ ಸಂಯುಕ್ತ ಗಣರಾಜ್ಯ (ಹಿಂದಿನ ಟಾಂಗೋನಿಕಾ ಅಂಝೀಬಾರ), ಝಾಂಬಿಯಾ ಮಾಲ್ವಿ, ಝೈರ್, ಇಥಿಯೋಫಿಯಾ ಅಥವಾ ವಿಯಟ್ನಾಂಗಳಿಗೆ ವಲಸೆ ಹೋದ ಭಾರತೀಯ ಮೂಲದ ವ್ಯಕ್ತಿ.

2) ಒಬ್ಬರಿಗಿಂತ ಹೆಚ್ಚು ಜೀವಂತ ಪತ್ನಿಯರನ್ನು ಹೊಂದಿದ ಪುರುಷ ಅಭ್ಯರ್ಥಿಗಳು ಸರ್ಕಾರದ ಪೂರ್ವಾನುಮತಿ ಇಲ್ಲದೇ ನೇಮಕಾತಿಗೆ ಅರ್ಹರಾಗಿರುವುದಿಲ್ಲ.

3) ಯಾವುದೇ ಅಭ್ಯರ್ಥಿಯು ಅಧಿಕೃತ ಅಥವಾ ಅನಧಿಕೃತ ಒತ್ತಡ ಅಥವಾ ಪ್ರಭಾವ ತರಲು ಪ್ರಯತ್ನಿಸಿದಲ್ಲಿ ಅವರು ನೇಮಕಾತಿಗೆ ಅರ್ಹರಾಗುವುದಿಲ್ಲ.

4) ಯಾವುದೇ ಅಭ್ಯರ್ಥಿಯು ಅರ್ಜಿ ಹಾಕುವ ಸಮಯದಲ್ಲಿ ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಅಥವಾ ಪ್ರಾಧಿಕಾರದಲ್ಲಿ ಖಾಯಂ ಅಥವಾ ತಾತ್ಕಾಲಿಕ ನೌಕರಿಯಲ್ಲಿದ್ದಲ್ಲಿ ಅಂತಹವರು ಸಂದರ್ಭಾನುಸಾರ ಎಲ್ಲಿ ಸೇವೆ ಸಲ್ಲಿಸುತ್ತಿದ್ದರೋ ಆಯಾ ಇಲಾಖಾ ಮುಖ್ಯಸ್ಥರು ಅಥವಾ ಸರ್ಕಾರದ ಅಥವಾ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಅರ್ಜಿ ಸಲ್ಲಿಸಿದ್ದಲ್ಲಿ ಅವರು ನೇಮಕಾತಿಗೆ ಅರ್ಹರಾಗುವುದಿಲ್ಲ. ಆದರೆ ಇದು ಸರ್ಕಾರದ ಯಾವುದೇ ಇಲಾಖೆಯಲ್ಲಿ ಸ್ಥಳೀಯ ಅಭ್ಯರ್ಥಿಯಾಗಿ ನೇಮಕ ಹೊಂದಿದ್ದಲ್ಲಿ ಅವರನ್ನು ಅಂತೆಯೇ ಪರಿಗಣಿಸುವವರೆಗೆ ಅನ್ವಯಿಸುವುದಿಲ್ಲ.

5) ಕೆಳಕಾಣಿಸಿದ ಯಾವುದೇ ವ್ಯಕ್ತಿ ಹುದ್ದೆಗೆ ನೇಮಕಾತಿಯಾಗಲು ಅರ್ಹರಲ್ಲ.

ಎ) ಕಾನೂನು ಬಾಹಿರ ಸಂಸ್ಥೆಯೆಂದು ಅಥವಾ ಸಂಘವೆಂದು ಘೋಷಿಸಲಾದಂತಹ ಯಾವುದೇ ಸಂಸ್ಥೆಯ ಅಥವಾ ಸಂಘದ ಸದಸ್ಯರಾಗಿದ್ದರೆ ಅಥವಾ ಸ್ವಂತ ಅಥವಾ ಬೇರೆಯವರ ಸಂಬಂಧ ಹೊಂದಿದ್ದಲ್ಲಿ ಅಥವಾ ಸಂಪರ್ಕ ಹೊಂದಿದ್ದಲ್ಲಿ ಅಥವಾ

ಬಿ) ಈ ಕೆಳಕಂಡ ಯಾವುದೇ ಚಟುವಟಿಕೆ ಅಥವಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರೆ ಅಥವಾ ಸಂಪರ್ಕವಿಟ್ಟುಕೊಂಡಿದ್ದರೆ ;

I. ಭಾರತ ಸಂವಿಧಾನವನ್ನು ಬುಡಮೇಲು ಮಾಡುವ ಉದ್ದೇಶವನ್ನು ಹೊಂದಿರುವ

II. ಹಿಂಸಾತ್ಮಕ ಕೃತ್ಯವು ಒಳಗೊಂಡ ಸಂಘಟಿತನ ಕಾನೂನು ಉಲ್ಲಂಘನೆ ಅಥವಾ ಪ್ರತಿಭಟನೆಯ ಉದ್ದೇಶ ಹೊಂದಿರುವ

III. ಭಾರತದ ಪರಮಾಧಿಕಾರದ ಮತ್ತು ಸಮಗ್ರತೆಯ ಹಿತಾಸಕ್ತಿಗಳಿಗೆ ಅಥವಾ ರಾಜ್ಯ ಭದ್ರತೆಗೆ ಪ್ರತಿಕೂಲವಾದ ಉದ್ದೇಶವನ್ನು ಹೊಂದಿರುವ ಅಥವಾ

IV. ಧರ್ಮ, ಕುಲ, ಭಾಷೆ, ಜಾತಿ ಅಥವಾ ಕೋಮುಗಳ ಆಧಾರದ ಮೇಲೆ ವಿವಿಧ ವರ್ಗಗಳ ಜನರ ನಡುವೆ ದ್ವೇಷ ಅಥವಾ ಹಗೆತನದ ಭಾವನೆಗಳನ್ನು ಪ್ರಚೋದಿಸುವ ಅಥವಾ

ಸಿ) ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಸೇವೆಯಿಂದ ವಜಾ ಆಗಿರುವವರು.

6) ಯಾವುದೇ ವ್ಯಕ್ತಿ ಕ್ರಿಮಿನಲ್ ಮೊಕದ್ದಮೆಯಲ್ಲಿ ಶಿಕ್ಷೆಗೆ ಗುರಿಯಾಗಿರಬಾರದು ಹಾಗೂ ಕೇಂದ್ರ ಅಥವಾ ಯಾವುದೇ ರಾಜ್ಯ ಲೋಕಸೇವಾ ಆಯೋಗದವರು ನಡೆಸುವ ಯಾವುದೇ ಪರೀಕ್ಷೆಗಳಿಗೆ ಅಥವಾ ಆಯ್ಕೆಗಳಿಗೆ ಹಾಜರಾಗುವುದರಿಂದ ತಾತ್ಕಾಲಿಕವಾಗಿ ಬಹಿಷ್ಕರಿಸಿದ್ದರೆ ಅಥವಾ ಖಾಯಂ ಆಗಿ ಅನರ್ಹಗೊಂಡಿದ್ದರೆ ಅಥವಾ ಬಹಿಷ್ಕರಿಸಿದ್ದರೆ. ಸರ್ಕಾರವು ಈ ಎಲ್ಲಾ ಸಂದರ್ಭಗಳನ್ನು ಪುರಾವಲೋಕಿಸಿ ಈ ನೇಮಕಾತಿಗೆ ಅರ್ಹನೆಂದು ಪರಿಗಣಿಸುವವರೆಗೆ ಸಾಧಾರಣವಾಗಿ ನೇಮಕಾತಿಗೆ ಅರ್ಹರಾಗಿರುವುದಿಲ್ಲ.

7) ಕ್ರಿಮಿನಲ್ ಅಪರಾಧ ಮೊಕದ್ದಮೆಗಳಲ್ಲಿ ಒಳಗೊಂಡ ಅಭ್ಯರ್ಥಿಯನ್ನು ಅನರ್ಹರೆಂದು ಪರಿಗಣಿಸಲಾಗುವುದು.

8) ಸುಳ್ಳು ಮಾಹಿತಿಯನ್ನೊಳಗೊಂಡ ಅರ್ಜಿಗಳು ಅನರ್ಹಗೊಳ್ಳುತ್ತವೆ.

9) ಕರ್ನಾಟಕ ರಾಜ್ಯದ ಯಾವುದೇ ಸರ್ಕಾರಿ ಹಾಗೂ ಅರೆ ಸರ್ಕಾರಿ ಸಂಸ್ಥೆಯ ಸೇವೆಯಿಂದ ವಜಾಗೊಂಡಿರುವ ನೌಕರರು ನೇಮಕಾತಿಗೆ ಅರ್ಹರಲ್ಲ.

10) ಸೇವಾ ನಿರತ ಅಭ್ಯರ್ಥಿಗಳ ವಾರ್ಷಿಕ ಪ್ರತಿಕೂಲ ನಮೂದುಗಳಿದ್ದರೆ ಅಥವಾ ಅವರ ವಿರುದ್ಧ ಇಲಾಖಾ ವಿಚಾರಣೆ ಇದ್ದರೆ ಅಂತಹ ಅಭ್ಯರ್ಥಿಗಳು ಅನರ್ಹರಾಗುವರು.

15) ಷರತ್ತುಗಳು:–

1) ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಆನ್‌ಲೈನ್ (Online) ಮುಖೇನ ಅರ್ಜಿ ಸಲ್ಲಿಸತಕ್ಕದ್ದು.

2) **ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದವರೆಗೆ ಕಾಯದೆ ಆದಷ್ಟು ಶೀಘ್ರವಾಗಿ ಆನ್‌ಲೈನ್ (Online) ಮೂಲಕ ಅರ್ಜಿ ಸಲ್ಲಿಸತಕ್ಕದ್ದು.**

3) ಅಭ್ಯರ್ಥಿಯು ಅರ್ಜಿ ಹಾಕುವ ಸಮಯದಲ್ಲಿ ಯಾವುದೇ ಕೇಂದ್ರ / ರಾಜ್ಯ ಸರ್ಕಾರದ ಯಾವುದೇ ಪ್ರಾಧಿಕಾರ ಅಥವಾ ಕೇಂದ್ರ ಅಥವಾ ರಾಜ್ಯ ಸಾರ್ವಜನಿಕ ಸ್ವಾಮ್ಯಗಳಲ್ಲಿ ನೌಕರಿಯಲ್ಲಿದ್ದಲ್ಲಿ ಅಂತಹವರು ಇಲಾಖಾ ಮುಖ್ಯಸ್ಥರ ಅಥವಾ ನೇಮಕಾತಿ ಪ್ರಾಧಿಕಾರಿಯಿಂದ ಸೂಕ್ತ ದೃಢೀಕರಣದ ಪತ್ರದೊಂದಿಗೆ ಸಮುಚಿತ ಮಾರ್ಗದಲ್ಲಿ ಅರ್ಜಿಯನ್ನು ಸಲ್ಲಿಸಬೇಕು ಹಾಗೂ ಕಾರಾಗೃಹ ಇಲಾಖೆಯಲ್ಲಿ ನೇಮಕಗೊಂಡಲ್ಲಿ ಕಾರಾಗೃಹ ಇಲಾಖಾ ಸೇವೆಗೆ ಕರ್ತವ್ಯದಿಂದ ಬಿಡುಗಡೆ ಮಾಡಲು ಅನುಮತಿ ಪತ್ರವಿರಬೇಕು.

4) ಅಭ್ಯರ್ಥಿಯು ನಿಗದಿಗೊಳಿಸಿದ ದೇಹದಾರ್ಢ್ಯತೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದರೆ ಮೌಖಿಕ ಸಂದರ್ಶನಕ್ಕೆ ಅರ್ಹತೆ ಹೊಂದುವುದಿಲ್ಲ.

5) ಅಭ್ಯರ್ಥಿಯು ಒಂದು ಸಲ ಆಯ್ಕೆ ಮಾಡಿದ ಪರೀಕ್ಷಾ ಕೇಂದ್ರವನ್ನು ಬದಲಾಯಿಸುವಂತಿಲ್ಲ.

6) ಅಂತಿಮವಾಗಿ ಆಯ್ಕೆಯಾದ ಅಭ್ಯರ್ಥಿಯು ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿ ಸೇವೆ ಸಲ್ಲಿಸಲು ಸಿದ್ಧನಾಗಿರಬೇಕು.

7) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

8) ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಅಭ್ಯರ್ಥಿಯ ಅನರ್ಹತೆಯ ಬಗ್ಗೆ ಪತ್ತೆಯಾದಲ್ಲಿ ಅಂತಹ ಅಭ್ಯರ್ಥಿಗಳನ್ನು ಅನರ್ಹರೆಂದು ಪರಿಗಣಿಸಲಾಗುವುದು.

9) ನೇಮಕಾತಿ ಸಮಿತಿಯ ನಡೆಸುವ ಯಾವುದೇ ಪರೀಕ್ಷೆಗಳಲ್ಲಿ ಅನುಚಿತವಾಗಿ ವರ್ತಿಸಿದರೆ ಅಥವಾ ನಕಲು ಮಾಡಿದ್ದು ಕಂಡು ಬಂದರೆ ಅಥವಾ ನಕಲು ಸಾಮಾಗ್ರಿಯನ್ನು ಹೊಂದಿದ್ದರೆ, ಅಂತಹ ಅಭ್ಯರ್ಥಿಗಳನ್ನು ಡಿಬಾರ್ ಮಾಡಲಾಗುವುದು.

10) ಅಭ್ಯರ್ಥಿಗಳು ಯಾವ ಪ್ರವರ್ಗದಡಿಯಲ್ಲಿ ಮೀಸಲಾತಿಯನ್ನು ಬಯಸುತ್ತಾರೋ ಅದೇ ಪ್ರವರ್ಗದಡಿಯಲ್ಲಿ ಆಯ್ಕೆ ಪ್ರಕ್ರಿಯೆಯನ್ನು ಮಾಡಲಾಗುವುದು. ಯಾವುದೇ ಕಾರಣಕ್ಕೆ ಅದನ್ನು ಬದಲಾಯಿಸುವಂತಿಲ್ಲ.

11) ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದ ನಂತರ ಮಾಡಿಸುವ ಮೀಸಲಾತಿ ಪ್ರಮಾಣ ಪತ್ರಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

12) ಅಭ್ಯರ್ಥಿಗಳಿಗೆ ಕೆಲಸದಲ್ಲಿ ಕನ್ನಡವನ್ನು ಉಪಯೋಗಿಸುವ ಪೂರ್ಣ ಪರಿಜ್ಞಾನವಿರಬೇಕು. ಮೇಲ್ಕಾಣಿಸಿದ ಹುದ್ದೆಗಳಿಗೆ ಆಯ್ಕೆ ಹೊಂದಿದ ಅಭ್ಯರ್ಥಿಗಳ ಪೈಕಿ ಎಸ್.ಎಸ್.ಎಲ್.ಸಿ ಅಥವಾ ಉನ್ನತ ಪರೀಕ್ಷೆಗಳಲ್ಲಿ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ತೆಗೆದುಕೊಂಡು ತೇರ್ಗಡೆಯಾಗದೆ ಇರುವ ಅಭ್ಯರ್ಥಿಗಳು 1984 ರ ಕೆ.ಸಿ.ಎಸ್. (ನೇಮಕಾತಿ) (ಕನ್ನಡ ಭಾಷಾ ಪರೀಕ್ಷೆ) ನಿಯಮಗಳನ್ವಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗದ ಹೊರತು ನೇಮಕ ಹೊಂದಲು ಅರ್ಹರಾಗುವುದಿಲ್ಲ. ಈ ಪರೀಕ್ಷೆಯನ್ನು ನೇಮಕಾತಿ ಪ್ರಾಧಿಕಾರಿ ನಡೆಸುವರು.

ಅಧ್ಯಕ್ಷರು

ಕಾರಾಗೃಹ ಇಲಾಖಾ ನೇಮಕಾತಿ ಸಮಿತಿ, ಬೆಂಗಳೂರು.

ಅನುಬಂಧ

ವೆಬ್ ಕ್ಯಾಮರಾ ಸಹಾಯದಿಂದ ಭಾವಚಿತ್ರವನ್ನು upload ಮಾಡುವ ಬಗ್ಗೆ ಸೂಚನೆಗಳು:

ವೆಬ್ ಕ್ಯಾಮರಾ ಅಳವಡಿಸಿರುವ ಗಣಕಯಂತ್ರದಲ್ಲಿ ವೆಬ್‌ಕ್ಯಾಮರಾವನ್ನು ಚಾಲನೆ ಮಾಡಿ (activate) ಭಾವಚಿತ್ರ ತೆಗೆಯುವ ಬಗ್ಗೆ ಅನುಸರಿಸಬೇಕಾದ ವಿಧಾನ:

ಹಂತ–1 :

1. ಸ್ಟಾರ್ಟ್ ಬಟನ್ (start button) ಕ್ಲಿಕ್ ಮಾಡಿ "ಕಂಟ್ರೋಲ್ ಪ್ಯಾನೆಲ್" (control panel) ಗೆ ಹೋಗುವುದು.
2. ಕಂಟ್ರೋಲ್ ಪ್ಯಾನೆಲ್ ಒಳಗೆ "ಸ್ಕ್ಯಾನರ್ಸ್ ಮತ್ತು ಕ್ಯಾಮರಾ" (scanners & camera) ಗಮನಿಸಿ ಅದರ ಮೇಲೆ ಕ್ಲಿಕ್ ಮಾಡಿರಿ.
3. ನಂತರ ಯು.ಎಸ್.ಬಿ. (U.S.B) ಕ್ಯಾಮರಾ ಡಿವೈಸನ್ನು ಗುರುತಿಸಿ ಅದನ್ನು ಕ್ಲಿಕ್ ಮಾಡುವುದು.
4. ಈಗ ಕ್ಯಾಮರಾ ಭಾವಚಿತ್ರ ತೆಗೆಯಲು ತಯಾರಾಗಿರುತ್ತದೆ.
5. "ಟೇಕ್ ಪಿಕ್ಚರ್"/ಟೇಕ್ ಸ್ನಾಪ್ ಶಾಟ್ (Take picture/Take snap shot) ಮೇಲೆ ಕ್ಲಿಕ್ ಮಾಡಿ ನಂತರ ಸದರಿ ಭಾವಚಿತ್ರವು ಆ ಗಣಕಯಂತ್ರದಲ್ಲಿ ಉಳಿಯುತ್ತದೆ. (store ಆಗುತ್ತದೆ)
6. ಅನಂತರ Next ಬಟನ್ ಅನ್ನು ಒತ್ತಿ ಗಣಕಯಂತ್ರದ ಬೇಕಾದ ಸ್ಥಳಕ್ಕೆ (location) ಭಾವಚಿತ್ರವನ್ನು ಉಳಿಸಬಹುದು (save)
7. ಕೊನೆಯದಾಗಿ ಭಾವಚಿತ್ರ ಉಳಿಸಿರುವ (save / stored) ಮಾಡಿರುವ ಡೈರೆಕ್ಟರಿಯು (Directory) ತೆರೆದುಕೊಳ್ಳುತ್ತದೆ.

ಹಂತ–2 :

ತೆಗೆಯಲಾಗಿರುವ ಭಾವಚಿತ್ರವನ್ನು ಪಾಸ್‌ಪೋರ್ಟ್ ಅಳತೆಗೆ ಪರಿವರ್ತಿಸುವ ವಿಧಾನ :

1) ಉಳಿಸಿರುವ ಭಾವಚಿತ್ರವನ್ನು ಪಿ ಬ್ರಶ್ (Paint Brush) ನಲ್ಲಿ ತೆರೆಯುವುದು.
2) ಭಾವಚಿತ್ರವನ್ನು (Image) ಆಯ್ಕೆ ಮಾಡಿ, ನಂತರ Image menu ಯಿಂದ ಸ್ಟ್ರೆಚ್ / ಸ್ಕ್ಯೂ ಆಯ್ಕೆ ಮಾಡುವುದು.
3) ಶೇಕಡಾ 30 ರಷ್ಟು ಹಾರಿಸಾಂಟಲ್ ಮತ್ತು ವರ್ಟಿಕಲ್ ಸ್ಟ್ರೆಚ್‌ಗೆ ದಾಖಲಿಸಿ ಓ.ಕೆ. ಬಟನ್ ಒತ್ತುವುದು.
4) ಸೆಲೆಕ್ಟ್ ಟೂಲ್ ಅನ್ನು ಉಪಯೋಗಿಸಿ ಭಾವಚಿತ್ರದ ಅಳತೆಗೆ ಬೇಕಾಗಿರುವ ಜಾಗವನ್ನು ಆಯ್ಕೆ ಮಾಡಿ ಮತ್ತು Delete ಕೀ ಬೋರ್ಡ್ ಉಪಯೋಗಿಸಿ, ಭಾವಚಿತ್ರಕ್ಕೆ ಅಗತ್ಯವಿದ್ದ ಜಾಗವನ್ನು ತೆಗೆದು ಹಾಕಿ.
5) ಫೈಲ್ ನ್ಯೂ (File new) ವನ್ನು ಆಯ್ಕೆ ಮಾಡಿ ಭಾವಚಿತ್ರವನ್ನು ಉಳಿಸಿಕೊಳ್ಳಿರಿ.
6) ಆಯ್ಕೆ ಮಾಡಿರುವ ಭಾವಚಿತ್ರವನ್ನು ಅಂಟಿಸಲು Ctrl + V ಅನ್ನು ಒತ್ತಿ.

ಹಂತ–3 :

ಸಹಿಯನ್ನು ಅಭ್ಯರ್ಥಿಗಳು ವೆಬ್‌ಸೈಟ್ ಮೂಲಕ ಅಪ್‌ಲೋಡ್ ಮಾಡುವ ವಿಧಾನ :

ಅಭ್ಯರ್ಥಿಯು ವೆಬ್ ಕ್ಯಾಮರಾ ಮೂಲಕ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅಪ್‌ಲೋಡ್ ಮಾಡಿದ ನಂತರ ಒಂದು ಬಿಳಿ ಹಾಳೆಯ ಮೇಲೆ ಕಪ್ಪು ಶಾಯಿಯಲ್ಲಿ ಸಹಿ ಮಾಡಿ ಅದನ್ನು jpeg/gif ಮಾದರಿಯಲ್ಲಿ ಸ್ಕ್ಯಾನ್ ಮಾಡಿ ಇಟ್ಟುಕೊಂಡಿರಬೇಕು. ಸ್ಕ್ಯಾನ್ ಮಾಡಿದ ಫೈಲ್‌ನ ಗಾತ್ರ 100 ಕೆ.ಬಿ.ಗಿಂತ ಮೀರದಂತಿರಬೇಕು. (soft copy of file size should be less than 100 KB) ಸ್ಕ್ಯಾನ್ ಮಾಡಿ ಇಟ್ಟುಕೊಂಡಿರುವ ಸಹಿಯನ್ನು ಕಂಪ್ಯೂಟರ್ ಮುಖೇನ ವೆಬ್‌ಸೈಟ್ www.karnatakaprisons.kar.nic.inಗೆ ಅಪ್‌ಲೋಡ್ ಮಾಡುವುದು. (upload signature)

ಅಧ್ಯಕ್ಷರು

ಪಿ.ಆರ್.235 ಕಾರಾಗೃಹ ಇಲಾಖಾ ನೇಮಕಾತಿ ಸಮಿತಿ, ಬೆಂಗಳೂರು.

CITY CIVIL COURT

OFFICE OF THE CITY CIVIL COURT, COURT COMPLEX, BANGALORE-9

NOTIFICATION

No.ADM-I(A)/341/2011, Dated: June 2, 2011

Sub: Appointment of Special Metropolitan Magistrate (Railways), Bangalore.

Applications are invited from eligible Advocates for filling up of the Post of Special Metropolitan Magistrate (Railways), Bangalore.

ELIGIBILITY:

1) The person shall hold a Degree in Law conferred by a University established by law in Indian or an equivalent qualification: and

a) has at any time acted for a period of not less than 6 months as a Judicial or Special Magistrate of the First Class; or

b) has practiced as a legal practitioner for a period of not less than 4 years and holds or has hold any post under the Government as required under section 13/18 of the code of Criminal Procedure, 1973.

OR

2. He is a probationer of the Indian Administrative Service allotted to the State of Karnataka or a probationer of the Karnataka Administrative Service Class-I, (Junior Grade).

Applications containing Bio-data along with attested true copies of Enrolment Certificate, LL.B., Degree Certificate and Certificate of service if any, shall reach this office before 4.00 P.M. on 30.06.2011.

BY ORDER OF THE PRL. CITY CIVIL & SESSIONS JUDGE,

PR-229

Registrar,

City-Civil Court, Bangalore.

DISTRICT AND SESSIONS COURT, BAGALKOT

NOTIFICATION NO. 3/2011, DATED : 03-06-2011

Sub : Recruitment for the Post of Stenographer, First Division Assistant, Typist and Peon (supporting staff to the Court Manager) on Contract (Fixed Tenure) basis in District and Sessions Court, Bagalkot.

Ref : Hon'ble High Court Letter No. LCA.II.74/2011 Dtd : 02-06-2011.

Applications are invited from the eligible candidates for appointment to the Post of Stenographer, First Division Assistant, Typist and Peon on Contract (Fixed Tenure) basis in District and Sessions Court, Bagalkot. The applications along with copies of the testimonials should reach the **DISTRICT AND SESSIONS JUDGE, BAGALKOT, ON OR BEFORE 28-06-2011 AT 5.00 P.M**.

Sl. No.	Name of the Post	No. of Posts	Basic Pay	Consolidated salary per month	Minimum Qualification
1	Stenographer	01	7275	11755	Must have passed the S.S.L.C. Examination or equivalent qualification and must have passed Senior Typewriting and Senior Shorthand examinations both in Kannada Language and Eglish Language conducted by the Department of Public Instructions or equivalent qualification.
2	FDA	01	7275	11645	Must be a holder of a Bachelor's Decree or equivalent qualification.
3	Typist	01	5800	9454	Must have passed the S.S.L.C. Examination or equivalent qualification and must have passed Senior Grade Typewriting Examination both in English and Kannada Language conducted by the Department of Public Instructions or possess equivalent qualification.
4	Peon	01	4800	7784	Must have passed the VII Standard Examination and must be able to read and write Kannada.

2. AGE LIMIT :

a) On the last date fixed for receipt of applications, Must have attained the age of 18 years and must not have attained the age of :

i) 40 years in the case of SC/ST and Category No.I.

ii) 38 years in the case of IIA/IIB/IIIA and IIIB.

iii) 35 years in the case of others.

b) Relaxation of age is permissible as per KCS (General Recruitment) Rules, 1977.

3. METHOD OF RECRUITMENT :

a) The selection will be made as per Karnataka Sub-ordinate Courts (Ministerial and Other Posts) (Recruitment) (Amendment) Rules, 2007 except the post of FDA. The selection for the post of FDA will be made on merit basis.

4. TERMS AND CONDITIONS OF APPOINTMENT.

1) The term of appointent is from the date of appointment till 31-03-2015 which can also be terminated at any time by the orders of Hon'ble the Chief Justice.

2) This appointment is on full time basis and during the term of appointment the supporting staff will not be entitled to take up any other employment whether it is part-time or so.

3) The term of appointment will not confer any right on the appointed candidate for being made permanent in the said posts or in any other posts in the Hon'ble High Court of Karnataka, Bangalore, or in any other Judicial District in the State.

4) The place of work will be at any one of the Judicial Districts in the State, which may be changed at any time, by the Order of Hon'ble the Chief Justice.

5. GENERAL INSTRUCTIONS :

a) There is no prescribed application form. Those who are eligible as per requirements mentioned above and willing to accept the above terms and conditions may apply furnishing all the relevant details supported by necessary documents. However, candidates should invariably mention to which post they are applying. Further the candidates should enclose their photograph, self attested copies of certificates to prove age, qualifications etc. They have to mention their address, Telephone number and E-mail ID without fail.

b) The in-service candidates should submit their applications through proper channel along with no-objection certificate of the competent authority.

c) The candidates should attend the typing test and interview, if called for, at their own expenses.

d) Defective/Incomplete applications without signature/photo/ enclosures are liable to be rejected.

e) Applications received after due date will not be considered and no correspondence will be entertained in this matter.

Place: Bagalkot **SHIVASHANKAR AMARANNAVAR**

Date : 03-06-2011. District and Sessions Judge, BAGALKOT.

PR-222

THE PRL. DISTRICT AND SESSIONS COURT, DHARWAD

N O T I F I C A T I O N, DATE: 7th June 2011

SUB: Appointment of Stenographer, first Division Assistant, Typist and Peon on Contract (Fixed Tenure) basis in the District and Sessions Court, Dharwad-reg

READ : 1. The Hon'ble High Court of Karnataka, Bangalore letter No. LCA-II74/2011, dated 02-06-2011.

2. Office Note and Orders passed thereon.

Applications are invited from the candidates who are having required qualification as mentioned below for being appointed on temporary (Fixed tenure-contract) basis for the posts of Stenographer, First Division Assistant, Typist and Peon in the District and Sessions Court, Dharwad, so as to reach the undersigned on or **before 28-06-2011 at 5-00 PM.** The details of vacancies are as under :

Designation	No. of Posts	Basic Pay	Gross Salary	Qualification.
Stenographer	01	7,275/-	11,755/	**1. Must have passed SSLC or equivalent examination.** 2. Must have passed Senior Typewriting & Senior Shorthand Examinations both in Kannada and English Language conducted by the Department of Public Instructions or equivalent examination. ***Preference will be given to candidates who possess certificate in Computer word processing or equivalent.***
FDA	01	7,275/-	11,645/	Must Posses a degree from a recognized University having passed in First class. *Preference will be given to candidates who possess certificate in Computer word processing or equivalent*.
Typist	01	5,800/-	9,454/-	**1. Must have passed SSLC or equivalent examination.** 2. Must have passed Senior Typewriting in Kannada and English Language conducted by the Department of Public Instructions or equivalent examination. *Preference will be given to candidates who possess certificate in Computer word processing or equivalent.*
Peon	01	4,800/-	7,784/-	1. Must have passed VII Standard Examination. 2. Must be able to read and Write Kannada.

AGE LIMIT :

On the last date fixed for receipt of applications, must have attained the age of 18 years and must not have attained the age of;

(A)

1) 35 years in case of others.
2) 38 years in case of a person belonging to any of the Category II-A, or II-B or III-A or III-B or other Backward Classes.
3) 40 years in case of persons belonging to SC/ST and Category-I.

(B) Relaxation of age is permissible as per KCS (General Recruitment) Rules 1977

METHOD OF RECRUITMENT :

Section of Candidates shall be made in accordance with the provisions contemplated in the Karnataka Sub-ordinate courts (Ministerial and other Posts)(Recruitment) (Amendment) Rules 2007.

Tests will be conducted for the posts of Stenographers/Typists. The candidates will have to appear before the Prl. District and Sessions Judge, Dharwad in the premises of District Court Dharwad at their costs.

For the post of Stenographers :

1) A dictation at the rate of 120 words per minute will be given for a duration of about five minutes and the candidates shall transcribe the notes within forty five minutes.
2) This test will carry maximum of 100 marks & minimum marks required for a pass shall be fifty.

For the post of Typist :

A dictation for duration of about fifteen minutes will be given and the candidates shall type the matter dictated. This test shall carry maximum of hundred marks and minimum marks for pass shall be fifty.

For the post of First Division Assistant:

The Selection for the post of First Division Assistant will be made on Merit Basis.

TERMS AND CONDITIONS OF APPOINTMENT:

1. The terms of appointment is from the date of appointment till 31-03-2015 which can be terminated by any time by the order of Hon'ble Chief Justice.
2. This appointment is on full time basis and during the terms of appointment the supporting staff will not be entitled to take up any other employment whether it is part-time or so.
3. The terms of appointment will not confer any right on the appointed candidate for being made permanent in the said post or any other post in the High Court of Karnataka, Bangalore or in any Judicial district in the State.

GENERAL INSTRUCTION:

1. The candidate shall enclose a Self-Addressed envelope with Rs. 5/- postal stamp affixed on the envelope. Further the candidates should enclose self-attested copies of certificates to prove age and qualification.
2. The Prescribed Application Forms for the above said posts is as under, if any variation in the application form, will not be entertained.
3. Defective/Incomplete applications without signature/photo/enclosures are liable to be rejected.
4. Application along with all details should reach this office on or before 28-06-2011 at 5-00 PM. Applications received thereafter will not be entertained
5. The candidate should attend the typing test and interview, if called for, at their own expenses.

NOTE: Only Zerox Copies of required certificates should be attached along with application.

For the Post of Stenographer	SSLC Marks Card, Certificate Senior Grande English & Kannada Typewriting and Senior Grade Shorthand (English & Kannada) (Certificate of Computer Word Processing of equivalent if any)
For the Post of FDA:	SSLC Marks Card, Bachelor's Degree Certificate and Marks Cards (Certificate of Computer Word Processing of equivalent if any)
For the Post of Typist:	SSLC Marks Card, Certificate of Senior Grande English & Kannada Typewriting (Certificate of Computer Word Processing of equivalent if any)
for the Post of Peon:	Marks Card of VII . School Leaving Certificate for age proof.

Place : Dharwad. Prl. District and Sessions Judge,

Date : 07-06-2011. Dharwad.

APPLICATION FORM FOR THE POST OF ______________.

To

The District and Sessions Judge,

DHARWAD.

Recent Passport size Photo.

Sir,

In response to Notification dated, 07-06-2011, regarding recruitment to the post of "______________" Supporting Staff to the Court Manager at District and Sessions Court, Dharwad. I beg to submit the following particulars.

1)	Name of the applicant in full (in Block Letters)	
3)	Present Postal Address	
4)	Date of birth and age as on the last dated fixed for receipt of application.	

5)	Whether candidates belongs to SC/ST/Cat-I/II-A/II-B/III-A/ III-B/GM (Only for the purpose of age relaxation).				
6)	Qualification	Month & year of passing	Maximum Marks	Marks Obtained	Percen-tage
a)	Bachelor Degree				
b)	SSLC or Equivalent examination				
c)	English Typewriting Senior				
d)	Kannada Typewriting Senior				
e)	English Shorthand Senior				
f)	Kannada Shorthand Senior				
g)	VII Standard				
7)	Computer Word Processing or equivalent if any.				

Place: Signature of applicant.

Date:

PR-233

PROCEEDINGS OF THE PRL. DISTRICT & SESSIONS JUDGE, BIJAPUR, AT; BIJAPUR

NOTIFICATION

No. 02/2011 dated.04-06-2011

Sub:- Appointment of Stenographer, First Division Assistant, Typist and Peon on Contract (Fixed Tenure) basis in the Court of the Prl.District & Sessions Judge, Bijapur – reg.

Applications are invited from the candidates who are having the required qualification as mentioned below for being appointed on temporary (Fixed tenure – contract) basis in the Court of the Prl. District & Sessions Judge, Bijapur.

Sl. No.	Name of the Post	Number of posts	Salary per month (Consolidated pay)	Qualification.
1.	Stenographer.	1	11755/-	1. Must have passed SSLC or equivalent examination. 2. Must have passed the Senior Typist Writing and Senior Short hand examinations in English and Kannada conducted by the Department of Public Instructions or the Karnataka Secondary Education Examination Board or equivalent qualification or must be holder of a Diploma in Secretarial practice granted by the Board of Technical Education in Karnataka. Certificate in Computer Word processing or equivalent.
2.	First Division Assistant.	1	11645/-	1) Must possess a degree from a recognized university. 2) Certificate in Computer Word processing or equivalent.
3.	Typist.	1	9454/-	1) Must have passed SSLC examination or equivalent qualification. 2) Senior Grade Typewriting examination both in English and Kannada. 3) Certificate in Computer Word Processing or equivalent.
4.	Peon	1	7784/-	1) Must have passed 7th Standard examination.

Terms and conditions of appointment:

1) The method of recruitment for the above said posts shall be as per Recruitment Rules, 1982 and as amended from time to time except FDA. The FDA shall be recruited on merit basis.
2) The terms of appointment is from the date of appointment till 31.3.2015 which can be terminated at any time by the order of Hon'ble Chief Justice.
3) This appointment is on full time basis and during the term of appointment the candidates will not be entitled to take up any other employment whether it is part-time or so.
4) The term of appointment will not confer any right on the appointed candidate for being made permanent in the said post or any other post in the High Court of Karnataka, Bangalore or in any Judicial District in the State.,
5) The place of work will be at any one of the Judicial District in the State which may be changed at any time by the Order of Hon'ble Chief Justice.

There is no prescribed application form. Those who are eligible as per requirements mentioned above and willing to accept the above terms and conditions may apply furnishing all the relevant details supported by necessary documents. However candidates should invariably mention to which post they are applying. Further the candidates should enclose their photograph, self attested copies of certificates to prove age, qualifications etc.

LAST DATE FOR APPLICATION:

Applications along with other details should reach the Prl.District and Sessions Judge, Bijapur, on or before 28th June, 2011. Applications received thereafter will not be entertained.

Prl. District & Sessions Judge,
Bijapur.

PR-234

DISTRICT AND SESSIONS COURT,KOPPAL

NOTIFICATION NO.3/2011, DATED:03-06-2011

Sub: Recruitment for the post of Stenographer, First Division Assistant, Typist and Peon (supporting staff to the Court Manager) on contract (Fixed Tenure) basis in District and Sessions Court, Koppal.

Ref: Hon'ble High Court letter No.LCA-II.74/2011, dated:02-06-2011.

Applications are invited from the eligible candidates for appointment to the post of Stenographer, First Division Assistant, Typist and Peon on Contract (Fixed Tenure) basis in District and Sessions Court, Koppal. The applications along with copies of the testimonials should be reached District & Sessions Court, Koppal on or before 28-06-2011 at 5-00 P.M.

Sl. No.	Name of the post	No.of Posts	Basic pay	Consolidated salary per month	Minimum Qualification
1	Stenographer	01	7,275/-	11,755/-	Must have passed the S.S.L.C.Examination or equivalent qualification and must have passed Senior Typewriting and Senior Shorthand examinations both in Kannada Language and English Language conducted by the Department of Public Instructions or equivalent qualification.
2	FDA	01	7,275/-	11,645/-	Must be a holder of a Bachelor's Decree or equivalent qualification.
3	Typist	01	5,800/-	9,454/-	Must have passed the S.S.L.C.Examination or equivalent qualification and must have passed Senior grade Typewriting examination both in Kannada Language and English Language conducted by the Department of Public Instructions or equivalent qualification.

Sl. No.	Name of the post	No.of Posts	Basic pay	Consolidated salary per month	Minimum Qualification
4	Peon	01	4,800/-	7, 784/-	Must have passed the VII Standard Examination and must be able to read and write Kannada.

2.AGE LIMIT:

a) On the last date fixed for receipt of application, must have attained the age of 18 years and must not have attained the age of:

i) 40 years in the case of SC/ST and Category No.I.

ii) 38 years in the case of IIA/IIB/IIIA and IIIB.

iii) 35 years in the case of others.

b) Relaxation of age is permissible as per KCS (General Recruitment) Rules, 1977.

3.METHOD OF RECRUITMENT:

a) The selection will be made as per Karnataka Sub-ordinate Courts (Ministerial and Other Posts) (Recruitment)(Amendment) Rules, 2007 except the post of FDA. The selection for the post of FDA will be made on merit basis.

4.TERMS AND CONDITIONS OF APPOINTMENT:

1) The term of appointment is from the date of appointment till 31-03-2015 which can also be terminated at any time by the orders of Hon'ble the Chief Justice.

2) This appointment is on full time basis and during the term of appointment the supporting staff will not be entitled to take up any other employment whether it is part time or so.

3) The term of appointment will not confer any right on the appointed candidate for being made permanent in the said posts or in any other posts in the Hon'ble High Court of Karnataka, Bangalore, or in any other Judicial District in the State.

4) The place of work will be at any one of the Judicial Districts in the State, which may be changed at any time, by the order of Hon'ble the Chief Justice.

5.GENERAL INSTRUCTIONS:

a) There is no prescribed application form. Those who are eligible as per requirements mentioned above and willing to accept the above terms and conditions may apply furnishing all the relevant details supported by necessary documents. However, candidates should invariably mention to which post they are applying. Further the candidates should enclose their photograph, self attested copies of certificates to prove age, qualifications etc. They have to mention their address, Telephone number and E-mail ID without fail.

b) The in-service candidates should submit their applications through proper channel along with no objection certificate of the competent Authority.

c) The candidates should attend the typing test and interview, if called for, at their own expenses.

d) Defective/Incomplete application without signature/photo/ enclosures are liable to be rejected.

e) Applications received after due date will not be considered and no correspondence will be entertained in this matter.

Place: Koppal
Date: 03-06-2011

C.S. MALAGI
District and Sessions Judge,
Koppal.

PR-226